ಜೊತೆಯಲ್ಲಿ ರಸ್ತೆ ಬದಿಯ ಗಾಡಿಗಳ ತಿಂಡಿ ತಿಂದು ಬರುತ್ತಿದ್ದ. ಹಾಗೆ ತಿಂದು ಬಂದಿದ್ದನ್ನು ಹೇಳುತ್ತಿದ್ದ ಕೂಡಾ.

'ಎಷ್ಟು ಚೆನ್ನಾಗಿರುತ್ತೆ ಗೊತ್ತಾ? ನಿಂಗೊಂದಿನ ಕಟ್ಟಿಸ್ಕೊಂಡು ಬರ್ಲಾ?' ಎಂದು ಅವನು ಬೆಣ್ಣೆ ಹಚ್ಚಲು ಬಂದರೆ ಸಿಟ್ಟಾಗುತ್ತಿದ್ದಳು ಭಾಮ.

'ಮಾಡಿಟ್ಟ ಅಡುಗೇನ ಯಾರು ತಿಂತಾರೆ? ಹೊರಗಡೆ ತಿನ್ನೋ ಅಭ್ಯಾಸ ಒಳ್ಳೇದಲ್ಲ ಕಣೋ. ಆರೋಗ್ಯ ಕೆಡಿಸ್ಕೋತಿ ನೋಡು.'

'ಏ, ಏನಾಗಲ್ಲ. ಎಷ್ಟು ಜನ ತಿಂತಾರೆ ಗೊತ್ತಾ? ಅವರಿಗೆಲ್ಲಾ ಬುದ್ಧೀನೇ ಇಲ್ಲ, ನಿಂಗೊಬ್ಳಿಗೆ ಮಹಾ ಬುದ್ಧಿ ಇರೋದಾ?'

'ಮಾತಿಗೆ ಪ್ರತಿಮಾತು ಹೇಳಿದ್ರೆ ಗೆದ್ದೆ ಅಂತಾನಾ? ನಿನ್ನ ಒಳ್ಳೇದಕ್ಕೇ ಹೇಳೋದು. ಈಗ ನೋಡು, ಮಾಡಿಟ್ಟಿದ್ದನ್ನೆಲ್ಲಾ ಫ್ರಿಜ್ಜಲ್ಲಿಟ್ಟು ನಾಳೆ ಅದನ್ನೇ ತಿನ್ಬೇಕಾ?'

'ನನ್ನ ಪಾಲಿಂದು ನಾನು ತಿಂತೀನಿ ಬಿಡು.'

'ಸೊಕ್ಕು ಎಷ್ಟಿದೆ ನೋಡು. ನಾನು ಏನೇ ಹೇಳಿದ್ರೂ ಅದಕ್ಕೊಂದು ಪ್ರತ್ಯುತ್ತರ ಹೇಳ್ತಿ. ತಿಂದಿದ್ದು ಕಣ್ಣಿಗೆ ಬಂದಿದೆ ನಿಂಗೆ.'

ಹಾಗೆನ್ನುತ್ತಿದ್ದಂತೆ ಥಟ್ಟನೆ ಅಮ್ಮನ ನೆನಪಾಗಿಬಿಡುತ್ತಿತ್ತು ಭಾಮನಿಗೆ. 'ತಿಂದಿದ್ದು ಕಣ್ಣಿಗೆ ಬಂದಿದೆ' ಅನ್ನುವುದು ಅಮ್ಮನದೇ ಪದ ಪ್ರಯೋಗ. ಅದೊಂದು ಮಾತ್ರವಾ? ಅಂತಹ ಎಷ್ಟೋ ವಾಕ್ಯಗಳು ತಮ್ಮನ ಮೇಲೆ ಪ್ರಯೋಗಿಸಲ್ಪಡುತ್ತಾ, ಅಮ್ಮನಾಗುತ್ತಿದ್ದೇನೆ ತಾನು. ಮತ್ತು ಈ ಪುಂಡ ಹುಡುಗ ಬೆಳೆಯುತ್ತಲೇ ಇಲ್ಲ ಅನಿಸಿ ನಗು ಬರುತ್ತಿತ್ತು ಅವಳಿಗೆ. ಅಮ್ಮನನ್ನು ಕಳೆದುಕೊಂಡಾಗ ರೂಢಿಸಿಕೊಂಡಿದ್ದ ಅವನ ಗಾಂಭೀರ್ಯ ಕ್ರಮೇಣ ತಲೆಮರೆಸಿಕೊಂಡಿದ್ದು ಅವಳು ಕಂಡುಕೊಂಡ ಸತ್ಯ. ಹುಡುಗ ದೈಹಿಕವಾಗಿ ಬೆಳೆದಿದ್ದಾನೇ ವಿನಃ ಹುಡುಗಾಟ ಬಿಟ್ಟಿಲ್ಲ ಎನ್ನುವುದನ್ನು ಅವಳು ಅರ್ಥ ಮಾಡಿಕೊಂಡಿದ್ದಾಳೆ. ಮನೆಯೊಳಗಿದ್ದಾಗ ಏನಾದರೊಂದು ಕಿತಾಪತಿ ನಡೆದೇ ಇರುತ್ತದೆ. ಕಿಟಕಿಯ ಚಜ್ಜ ಹಿಡಿದು ನೇತಾಡುತ್ತಾನೆ. ಫ್ಯಾನಿನ ಕೆಳಗೆ ನಿಂತು ಎಗರೆಗರಿ ಅದರ ರೆಕ್ಕೆಗಳನ್ನು ಮುಟ್ಟಲು ಪ್ರಯತ್ನಿಸುತ್ತಾನೆ. ಅಕ್ಕ ಅಡುಗೆ ಮಾಡುತ್ತಾ ಮೈಮರೆತಿದ್ದರೆ ಹಿಂದಿನಿಂದ ಹೋಗಿ ಜಡೆ ಎಳೆಯುತ್ತಾನೆ. ಚಪಾತಿ ಬೇಯಿಸಿ ಕೊಡಲು ಹಾಜರಾಗುತ್ತಾನೆ. ಅಮ್ಮನನ್ನು ಕಳೆದುಕೊಂಡ ಆ ಕಾಲವನ್ನು ಮರೆತೇ ಬಿಟ್ಟವನ ಹಾಗೆ ಅವನು ವರ್ತಿಸುವುದು ಭಾಮನಿಗೆ ಸಮಾಧಾನ ಕೊಟ್ಟಿರುವುದಂತೂ ಹೌದು. 'ಖುಷಿಖುಷಿಯಾಗಿ ಅವನು ಹೀಗೇ ಇರಲಿ' ಎಂದು ಹೃತ್ಪೂರ್ವಕವಾಗಿ ಹಾರೈಸುತ್ತಾಳೆ ಭಾಮ. ತನ್ನಂಥ ಹೆಣ್ಣುಮಕ್ಕಳು ವಯಸ್ಸಿಗೂ ಮೀರಿ ಬೆಳೆದು ಬಿಡುತ್ತಾರೆ ಎಂದು ಅವಳಿಗನಿಸುತ್ತದೆ. ಸ್ವಂತ ಮನೆ ಎಂದಾದ ಮೇಲೆ ಭಾಮನಿಗೆ ಆ ಮನೆಯ ಕುರಿತು ಒಂದು ಬಗೆಯ ವ್ಯಾಮೋಹ ಶುರುವಾಗಿದೆ. ಹಳೆ ಮನೆಯಾದರೂ ಮಾಲೀಕ ಸ್ವತಃ ನಿಂತು 40x60 ಸೈಟಿನಲ್ಲಿ ಕಟ್ಟಿಸಿದ್ದ ಮನೆ. ಕೆಳಗೆ ವಿಶಾಲವಾದ ಎರಡು ಬೆಡ್ ರೂಮುಗಳು ಮತ್ತು ಮಹಡಿಯ ಮೇಲೆ ಮತ್ತೆ ಎರಡು. ಹೊಂದಿಕೊಂಡಂತೆ ಟಾಯ್ಲೆಟ್ಟುಗಳು. ಕೆಳಗಿನ ರೂಮುಗಳಲ್ಲಿ ಒಂದು ಚಿದಾನಂದನಿಗೆ, ಮತ್ತೊಂದು ಸತಗ್ಯಭಾಮನಿಗೆ. ಮೇಲಿನ ರೂಮಿನಲ್ಲಿ ಭಾರ್ಗವನ ಕಾರುಬಾರು. ಖಾಲಿಯಿರುವ ಮತ್ತೊಂದು ರೂಮು ಅತಿಥಿಗಳಿಗೆ ಮೀಸಲು.

'ಯಾರು ಬರ್ತಾರೆ ನಮ್ಮನೆಗೆ? ಯಾರೂ ಇಲ್ಲ...' ಅಂದಿದ್ದಳು ಭಾಮ.

'ಇನ್ನೆಷ್ಟು ವರ್ಷ? ಹಾಂ ಹೂಂ ಅನ್ನೋದ್ರಲ್ಲಿ ಮನೆಗೆ ಅಳಿಯ ಬರ್ತಾನೆ. ಅವನ ಬಳಗದವರು ನೆಂಟರಾಗ್ತಾರೆ. ಬರೋರು ಹೋಗೋರು ಅಂತ ಎಲ್ಲಾ ಶುರುವಾಗುತ್ತೆ' ಹೇಳಿದ್ದ ಚಿದಾನಂದ.

'ಈಗಿನ್ನೂ ಕಾಲೇಜಿಗೆ ಸೇರ್ಕೊಂಡಿದೀನಿ. ಆಗಲೇ ನೀನು ಮದುವೆ ಮಾಡೋಕೆ ಹೊರಟುಬಿಟ್ಟೆ...'

'ಕಾಲ ಓಡ್ತಿರುತ್ತೆ ಕಣೇ. ಈಗ ನೋಡು, ನಿಮ್ಮಮ್ಮ ಇನ್ನೂ ನಿನ್ನೆ ಮೊನ್ನೆ ಹೊರಟುಹೋದ್ಲು ಅನ್ನೋ ಹಾಗಿದೆ. ಇಷ್ಟೊರ್ಷ ಕಳೆದಿದ್ದು ಗೊತ್ತೇ ಆಗ್ಲಿಲ್ಲ...'

ನಿಟ್ಟುಸಿರುಗರೆದನೇ ಚಿದಾನಂದ? ತಾನು ಮದುವೆಯಾಗಿ ಅಪ್ಪನನ್ನು, ತಮ್ಮನನ್ನು ತೊರೆದು ಹೋದರೆ ತಮ್ಮನಿಗೆ ಮದುವೆಯಾಗಿ ಹೆಂಡತಿ ಮನೆಗೆ ಬರುವವರೆಗೆ ಈ ಮನೆಗೆ ಯಾರು ದಿಕ್ಕು? ಅವಳ ಮನಸ್ಸನ್ನು ಓದಿಕೊಂಡವನಂತೆ ಹೇಳಿದ್ದ ಚಿದಾನಂದ, 'ಇದೇ ಊರಲ್ಲಿರೋ ಹುಡುಗನ್ನ ಹುಡುಕ್ತೀನಿ ಕಣೇ. ಸಾಧ್ಯವಾದ್ರೆ ಇದೇ ಏರಿಯಾದಲ್ಲಿರೋನು. ನಿನ್ನನ್ನ ಬಿಟ್ಟಿರೋಕೆ ಸಾಧ್ಯಾನೇ ಇಲ್ಲ ಅನ್ನುವಷ್ಟು ನಿನ್ನ ಹಚ್ಕೊಂಬಿಟ್ಟಿದೀವಿ. ಅಮ್ಮ ಇಲ್ಲ ಅನ್ನೋದು ಗೊತ್ತಾಗದ ಹಾಗೆ ಮನೆ ನಡೆಸ್ತಿದ್ದಿ. ಅದಕ್ಕೇ ಹೇಳೋದು, ಒಬ್ಬ ಹುಡುಗ ಅಂದರೆ ಒಬ್ಬ ಹುಡುಗ. ಒಬ್ಬ ಹುಡುಗಿ ಅಂದ್ರೆ ಒಬ್ಬ ಪುಟ್ಟ ಹೆಂಗಸು...' ಅಪ್ಪನ ಹೊಗಳಿಕೆಗೆ ಉಬ್ಬಿ ಹೋಗಿದ್ದಳು ಭಾಮ. ಉಬ್ಬಿದ ಈ ಬಲೂನಿಗೆ ಕೆಲವೇ ದಿನಗಳಲ್ಲಿ ಸೂಜಿ ಮೊನೆ ಚುಚ್ಚಿ ಒಡೆದು ಹೋಗುತ್ತದೆ ಎಂದು ಆ ಮಾತಾಡಿದ ಚಿದಾನಂದನಿಗೂ ಅರಿವಿಲ್ಲ ಮತ್ತು ಕೇಳಿಸಿಕೊಂಡ ಮುಗ್ಧೆಗೂ.

* * *

'ತಾನೊಂದು ಬಗೆದರೆ ದೈವ ಮತ್ತೊಂದು ಬಗೆಯಿತು' ಅನ್ನುವ ಹೇಳಿಕೆ ಮಾತುಂಟು. ಹೈಸ್ಕೂಲಿಗೆ ಹೋಗುವ ಭಾರ್ಗವ ನಾಲ್ಕೂವರೆಯ ಹೊತ್ತಿನಲ್ಲಿ ಸ್ಕೂಲ್ ವ್ಯಾನಿನಲ್ಲಿ ಬಂದಿಳಿಯುತ್ತಾನೆ. ಕಾಲೇಜಿಗೆ ಹೋಗುವ ಭಾಮ ಕೂಡಾ ಸರಿಸುಮಾರು ಅದೇ ಹೊತ್ತಿಗೆ, ಅಥವಾ ಅರ್ಧ ಮುಕ್ಕಾಲು ಗಂಟೆ ತಡವಾಗಿ ಮನೆಗೆ ಬರುತ್ತಾಳೆ. ಅವಳು ಸಿಟಿ ಬಸ್ಸು ಹಿಡಿದು ಬರಬೇಕು. ಪ್ರಯಾಣಕ್ಕೇ ತಗಲುತ್ತದೆ ಅರ್ಧ ಗಂಟೆ. 'ಬೆಂಗಳೂರಲ್ಲಿ ಅದು ಮಹಾ ದೂರವೇನಲ್ಲ' ಎಂದು ಅವಳಿಗೆ ಗೊತ್ತಿದೆ. ಹೀಗೆ ಓಡಾಡುವುದು ಅಭ್ಯಾಸವೂ ಆಗಿದೆ. ಚಿದಾನಂದನಿಗೆ ಬ್ಯಾಂಕ್ ಸಮೀಪದಲ್ಲಿದೆ. ಕೆಲವೊಮ್ಮೆ ಮಧ್ಯಾಹ್ನದ ಊಟಕ್ಕೆ ಅವನು ಮನೆಗೆ ಬಂದುಬಿಡುತ್ತಾನೆ. ಆದರೆ ಕ್ಯಾರಿಯರ್ ತೆಗೆದುಕೊಂಡು ಹೋಗುವ ದಿನಗಳೇ ಹೆಚ್ಚು. ಸದ್ಯದಲ್ಲೇ ಕಾರು ಕೊಂಡುಕೊಳ್ಳುವ ಯೋಚನೆ ಅವನಿಗಿದೆ. ಆ ವಿಷಯ ಅವನು ಮನೆಯಲ್ಲಿ ಹೇಳಿದಾಗ ಮಕ್ಕಳು ಸಂತಸದ ಪರಾಕಾಷ್ಠೆಗೇರಿದ್ದರು. ಯಾವ ಕಾರು? ಯಾವ ಬಣ್ಣ? ಇತ್ಯಾದಿಗಳ ಬಗ್ಗೆ ದಿನವೂ ಎನ್ನುವಂತೆ ಆ ಮನೆಯಲ್ಲಿ ಚರ್ಚೆ ಶುರುವಾಗಿತ್ತು. ಹೊಸ ಹೊಸ ಮಾಡೆಲ್‌ನ ಕಾರುಗಳ ಕುರಿತಾಗಿ ಭಾರ್ಗವನಿಗೆ ಇರುವಷ್ಟು ತಿಳಿವಳಿಕೆ ಭಾಮನಿಗಿಲ್ಲ. ಅವನು ಹೇಳುವ ಪ್ರವರ ಕೇಳುತ್ತಾ ಅವಳು ದಂಗಾಗುತ್ತಿದ್ದಳು.

'ಪರ್ವಾಗಿಲ್ಲ ಕಣೋ. ಓದಿ ಒಳ್ಳೆಯ ನಂಬರ್ ತೆಗೆಯೋದೊಂದು ಬಿಟ್ಟು ಬಾಕಿ ಎಲ್ಲಾ ಗೊತ್ತಿದೆ ನಿಂಗೆ' ಛೇಡಿಸುತ್ತಿದ್ದಳು.

'ನನ್ನ ಫ್ರೆಂಡ್ಸ್ ಎಷ್ಟೋ ಜನ ಕಾರಲ್ಲೇ ಸ್ಕೂಲಿಗೆ ಬರೋದು ಕಣೇ. ಕಾರು ತಗೊಂಡ್ಮೇಲೆ ನಾನೂ ಅದರಲ್ಲೇ ಸ್ಕೂಲಿಗೆ ಹೋಗ್ತೀನಿ..'

'ಆಯ್ತಪ್ಪಾ ದೊಡ್ಡ ಮನುಷ್ಯ. ಅಪ್ಪ ಆಮೇಲೆ ಬ್ಯಾಂಕ್ ಕೆಲಸ ಬಿಟ್ಟು ನಿನ್ನ ಡ್ರೈವರ್ ಕೆಲಸ ಮಾಡ್ತಾರೆ, ಆಯ್ತಾ?'

'ಒಬ್ಬ ಡ್ರೈವರನ್ನ ಇಟ್ಕೊಂಡ್ರಾಯ್ತಪ್ಪಾ...'

'ಸಂಬಳ ನೀನು ಕೊಡ್ತೀಯಾ?'

'ಬ್ಯಾಂಕು ಕೊಡುತ್ತೆ ಕಣೇ. ಎಲ್ಲಿದೀಯ ನೀನು?'

'ಯಾರೋ ಹೇಳಿದ್ದು?'

'ನನ್ನ ಫ್ರೆಂಡ್ಸ್‌ಗೆ ಎಲ್ಲಾ ಗೊತ್ತುಂಟು. ಏನಂದ್ಕಂಡಿದ್ದಿ ನೀನು?'

'ಹಾಗಿದ್ರೆ ನಾನೂ ಕಾಲೇಜಿಗೆ ಕಾರಲ್ಲಿ ಹೋಗ್ಬೋದು...'

'ಓಹೋ'

'ಕೇಳ್ತೀನಿ ಅಪ್ಪನ್ನ...'

'ಕೇಳು ಕೇಳು...'

ಹೀಗೆ ಕೇಳುವ ಸಂದರ್ಭವೇ ಒದಗಿ ಬರಲಿಲ್ಲ. ತಂದೆ ಮಕ್ಕಳ ನಡುವೆ, ಅಲ್ಲಲ್ಲ, ತಂದೆ ಮಗಳ ನಡುವೆ ಹುಳಿ ಹಿಂಡುವಂತಹ, ಭಾಮನ ಮನಸ್ಸು ಮುರಿದು ಚೂರು ಚೂರಾಗುವಂತಹ ಕಹಿ ಘಟನೆಯೊಂದಕ್ಕೆ ಅವಳು ಸಾಕ್ಷಿಯಾಗಬೇಕಾಯ್ತು. ಅವಳು ಓದುತ್ತಿದ್ದಿದ್ದು ಖಾಸಗಿ ಕಾಲೇಜಿನಲ್ಲಿ. ಪ್ರತಿಷ್ಠಿತ ಎಂಬ ವಿಶೇಷಣದೊಂದಿಗೆ ಗುರುತಿಸಿಕೊಂಡಿದ್ದ ಆ ಕಾಲೇಜಿನಲ್ಲಿ ಸೀಟು ಸಿಕ್ಕಿದ್ದೇ ಅವಳಿಗೆ ಅಭಿಮಾನದ ವಿಷಯ. ಚೆನ್ನಾಗಿ ಓದಿ, ಡಿಸ್ಟಿಂಕ್ಷನ್ನಿನಲ್ಲಿ ಪಾಸಾಗಿ, ಎಂ.ಎ. ಮಾಡಿ, ಹೀಗೆ ಕನಸುಗಳ ಬೆನ್ನು ಹತ್ತಿದ್ದ ಹುಡುಗಿ ತನಗೆ ದೊರಕುತ್ತಿದ್ದ ಬಿಡುವಿನ ಸಮಯವನ್ನು ಓದಿಗೆ ಮೀಸಲಿಟ್ಟಿದ್ದಳು. ಮನಸ್ಸುಗೊಟ್ಟು ಓದುತ್ತಿದ್ದಳು. ಅವತ್ತು, ಅವಳ ಮಾನಸಿಕ ನೆಮ್ಮದಿಯನ್ನೇ ಕಸಿದುಕೊಂಡ ಆ ದುರ್ದಿನ, ಆಡಳಿತ ಮಂಡಳಿಯ ಸದಸ್ಯರೊಬ್ಬರು ತೀರಿಕೊಂಡ ಕಾರಣ ಕಾಲೇಜಿಗೆ ರಜೆ ಘೋಷಣೆಯಾಗಿತ್ತು. 'ಸಿನಿಮಾ, ಹೋಟೆಲು...' ಎಂದು ಮಾತಾಡಿಕೊಳ್ಳುತ್ತಿದ್ದ ಗೆಳತಿಯರ ನಡುವಿನಿಂದ ಕಳಚಿಕೊಂಡು ಮನೆಗೆ ಹೊರಟಿದ್ದಳು ಭಾಮ.

'ಇದೊಂದು ಗೂಬೆ. ಖುಷಿಯಾಗಿರೋಕೇ ಗೊತ್ತಿಲ್ಲ' — ಸಹಪಾಠಿಯೊಬ್ಬಳು ಛೇಡಿಸಿದ್ದು ಅವಳ ನಿರ್ಧಾರವನ್ನು ಬದಲಿಸಿರಲಿಲ್ಲ. ಇಲ್ಲದಿದ್ದರೆ ಗೆಳತಿಯರ ಜೊತೆ ತಾನೂ ಮೋಜು, ಮಸ್ತಿಗೆಂದು ಹೊರಟಿದ್ದರೆ ಬಚಾವಾಯಿ ಬದುಕಿಕೊಳ್ಳುತ್ತಿದ್ದಳು